

ಆಗಸ್ಟ್‌ರಲ್ಲಿ ಯಶವಂತರಾವ್ ಜಠಾರ ಅವರು ಆರಂಭಿಸಿದ 'ಪ್ರಭಾತ' (ಮೊದಲ ಸಂಚಿಕೆ) ಪತ್ರಿಕೆಯಲ್ಲಿ 'ತುತ್ತೂರಿ' ಪ್ರಕಟವಾಗಿತ್ತು. ಇದು ಬೇಂದ್ರೆಯವರ ಮೊದಲ ಪ್ರಕಟಿತ ಕವಿತೆ. ಈ ಕವಿತೆಯು ಬೇಂದ್ರೆಯವರ ಇತ್ತೀಚಿನ (ಮರಣೋತ್ತರ) ಸಂಕಲನ 'ಶತಮಾನ'ದಲ್ಲಿ (2004) ಸೇರಿದೆ. ಅದರಲ್ಲಿ 'ಈ ಕವಿತೆಯನ್ನು ಮಹಾರಾಷ್ಟ್ರ ಕವಿ ಕೇಶವಸುತ ಇವರ 'ತುತಾರಿ'ಯ ಹೆಸರನ್ನು ಕೇಳಿ ಬರೆದೆನೆ ಹೊರತು ಅದನ್ನು ನಾನು ಓದಿಲ್ಲ' ಎಂದು ಟಿಪ್ಪಣಿ ನೀಡಿದ್ದಾರೆ. ಕವಿತೆಗಳನ್ನು ಪ್ರಕಟಿಸುವುದಕ್ಕಾಗಿಯೇ ಮೀಸಲಾಗಿದ್ದ 'ಪ್ರಭಾತ' ಪತ್ರಿಕೆಯಲ್ಲಿ 'ತುತ್ತೂರಿ' ಮಾತ್ರವಲ್ಲದೆ, 'ರಾತ್ರಿ', 'ಸರಸ್ವತಿ', 'ಅಹಹ ಸ್ವತಂತ್ರದೇವಿ' ಕವನಗಳು ಪ್ರಕಟಗೊಂಡಿದ್ದವು. 1922ರಲ್ಲಿ 'ಅಂಬಿಕಾತನಯದತ್ತ'ರ ಮೊದಲ ಪ್ರಕಟಿತ ಕೃತಿ 'ಕೃಷ್ಣಕುಮಾರಿ' ಬೆಳಕು ಕಂಡಿತು. ವಾರ್ಧಕ ಷಟ್ಪದಿಯಲ್ಲಿರುವ 'ಕೃಷ್ಣಕುಮಾರಿ' ಪ್ರಕಟಿಸುವ ಮುನ್ನವೇ ಬೇಂದ್ರೆಯವರು ವಾರ್ಧಕ ಷಟ್ಪದಿಯಲ್ಲಿ ಬಸವಣ್ಣನವರ ಜೀವನವನ್ನು ಕುರಿತು ಖಂಡಕಾವ್ಯ ರಚಿಸುವ ಇರಾದೆ ಹೊಂದಿದ್ದರು. ಅದಕ್ಕಾಗಿ ಒಂದು ಷಟ್ಪದಿಯನ್ನೂ ರಚಿಸಿದ್ದರು. ಅದನ್ನ ನಿಲ್ಲಿಸಿ, 'ಕೃಷ್ಣಕುಮಾರಿ' ಮುಂದುವರೆಸಿ ಪ್ರಕಟಿಸಿದರು.

19ನೇ ಶತಮಾನದ ಕೊನೆಯ ವರುಷಗಳಲ್ಲಿ ಧಾರವಾಡದಲ್ಲಿ (1896 ಜನವರಿ 31)ಜನಿಸಿದ 'ದತ್ತಾತ್ರೇಯ' ಅವರು ಗೆಳೆಯರ- ಒಡನಾಡಿಗಳ ಪಾಲಿಗೆ 'ದತ್ತು', 'ದತ್ತ' ಆಗಿದ್ದರು. ಅಷ್ಟು ಮಾತ್ರವಲ್ಲದೆ, ಕೆಲವರಿಗೆ 'ದತ್ತ್ಯಾ' ಕೂಡ ಆಗಿದ್ದರು. 'ವಾಗ್ಭೂಷಣ' ಸಂಪಾದಕರಾಗಿದ್ದಾಗ (ಸಂಪುಟ 22–10, 1919) 'ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ' ಆದರೆ, 'ವಾಗ್ಭೂಷಣ' ಪತ್ರಿಕೆಯ ಉಪಸಂಪಾದಕರ ಪಟ್ಟಿಯಲ್ಲಿ (ಸಂಪುಟ 25) 1920 ಶ್ರೀ ಡಿ.ಆರ್. ಬೆಂದರೆ ಬಿ.ಎ. ಎಂದು ದಾಖಲಾಗಿತ್ತು.

ಹೆಸರಿನಲ್ಲೇನಿದೆ? ಎಂದು ಯಾರಾದರೂ ಕೇಳಬಹುದು. ಪ್ರಶ್ನೆ ಸರಳ-ಸಹಜ ಅನ್ನಿಸಿದರು. ಉತ್ತರ ಅಷ್ಟೇ ನೇರವಾಗಿಲ್ಲ. ಮೇಲ್ನೋಟಕ್ಕೆ ಪ್ರಶ್ನೆ ಸರಿಯಾಗಿದೆ ಎಂದೂ ಅನ್ನಿಸಬಹುದು. ಆದರೆ, ವಾಸ್ತವವಾಗಿ ಹೆಸರಿನಲ್ಲಿ ಏನಿಲ್ಲ? ಎಂದು ಮರಳಿ ಕೇಳುವುದು ಸರಿಯಾದ ಉತ್ತರ ಅಲ್ಲ. ಅದಕ್ಕೆ, ಹೆಸರಿನಲ್ಲಿಯೇ ಎಲ್ಲವೂ ಇದೆ ಎಂದು ಹೇಳಬಹುದು.

ಧಾರವಾಡದ ಪೂರ್ವಭಾಗದಲ್ಲಿರುವ ಅತ್ತಿಕೊಳ್ಳದಲ್ಲಿ ಕಾಣಿಸಿದ ಸೂರ್ಯೋದಯವು 'ಬರಿ ಬೆಳಗಲ್ಲೋ ಅಣ್ಣ' ಎಂದು ಕೊನೆಗೊಂಡಿತ್ತು. 'ಬೆಳಗು' ಕವಿತೆಯನ್ನು 'ಸದಾನಂದಿ ಜಂಗಮ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದ ಬೇಂದ್ರೆಯವರು ಸರಿಸುಮಾರು 16 ಬೇರೆಬೇರೆ ಹೆಸರುಗಳಲ್ಲಿ ಲೇಖನ, ಕವನ, ಬರಹ ಪ್ರಕಟಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದದ್ದು 'ಅಂಬಿಕಾತನಯದತ್ತ'.

'ನಾನು ಫರ್ಗ್ಯುಸನ್ ಕಾಲೇಜ, ಪೂನಾದಲ್ಲಿ ಕಲಿಯುವಾಗ ಮರಾಠಿಯಂತೆ ಇಂಗ್ಲಿಷಿನಲ್ಲಿ ಕವಿತೆ ಮಾಡಿದ್ದ; ಅವುಗಳ ಕವಿ 'Ben Ramson'! ಬೇಂದ್ರೆ ರಾಮಚಂದ್ರನ ಮಗ- ಎಂದು ಸಂಕೇತ- ಸ್ಫೂರ್ತಿ. ಇಂಗ್ಲಿಷು ಪುಷ್ಟಿ ಪಡೆದ ಪಿಂಡಪೋಷಣೆ ನಮ್ಮ ಚಿಕ್ಕಪ್ಪನ ಸಂಪೂರ್ಣ ಆಶ್ರಯದಲ್ಲಿ. ನಾನು ಬಿ.ಎ. ಆದದ್ದು 1918ರಲ್ಲಿ; ಎಂ.ಎ. ಮುಗಿಸಿದ್ದು 1935. ಚಿಕ್ಕಪ್ಪ ತೀರಿಕೊಂಡದ್ದು ಆಗ. ಮರಾಠಿ ಕವನಗಳಿಗೆ ಮನೆತನದ ಮಾತು ಕಾರಣ. ಭಾಷೆ ಯಾವುದೇ ಇರಲಿ, ಅದರ ಸ್ಫೂರ್ತಿ ಸ್ಥಾನ 'ಅಂಬಿಕೆ' ಎಂದು 'ಕಾವ್ಯೋದ್ಯೋಗ'ದಲ್ಲಿ (1962)ದಾಖಲಿಸಿದ್ದಾರೆ. ಆದರೆ, ನನಗೆ 'Ben Ramson' ರಚನೆಗಳು